## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

## ಃಸಿ.ಸಿ. ಸಂಖ್ಯೆ–352ಃ2023

| | | |
|---|---|---|
| ಪಿರ್ಯಾದಿ | ಃ | ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸಿ<br>ಬೇಲೂರು ಪೋಲಿಸ್ |

ವಿರುದ್ದ

| | | |
|---|---|---|
| ಆರೋಪಿತರು | ಃ | ಇಂದಿರಮ್ಮ ಮತ್ತು ಇತರರು |

ಃ ದೋಷಾರೋಪಣೆ ಃ

1. ಇಂದಿರಮ್ಮ ಃಬಿನ್ಃ ಲೇಟ್ ಬಸವೇಗೌಡ, 49 ವರ್ಷ, ಚನ್ನಾಪುರ ಗ್ರಾಮ, ಕಸಬಾ ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.
2. ಮಹೇಶ ಃಬಿನಿಃ ಲೇಟ್ ಲಿಂಗೇಗೌಡ, 38 ವರ್ಷ, ಚನ್ನಾಪುರ ಗ್ರಾಮ, ಕಸಬಾ ಹೋಬಳಿ, ಬೇಲೂರು ತಾಲ್ಲೂಕ, ಹಾಸನ ಜಿಲ್ಲೆ.
3. ಲತಾಮಣಿ ಃಕೋಂಃ ನಟರಾಜ, 42 ವರ್ಷ, ಚನ್ನಾಪುರ ಗ್ರಾಮ, ಕಸಬಾ ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.
4. ನೀಲಮ್ಮ ಃಕೋಂಃ ಲೇಟ್ ಲಿಂಗೇಗೌಡ, 60 ವರ್ಷ, ಚನ್ನಾಪುರ ಗ್ರಾಮ, ಕಸಬಾ ಹೋಬಳಿ, ಬೇಲೂರು ತಾಲ್ಲೂಕು.

ಈ ಕೇಸಿನಲ್ಲಿ ಆರೋಪಿಯಾಗಿರುವ ನಿಮ್ಮ ಮೇಲೆ

ಕುಃ ಎಂ.ಎಸ್. ಶಶಿಕಲಾ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೇಲೂರು ಆದ ನಾನು ಈ ಕೆಳಕಂಡ ಆರೋಪವನು ಇಡುತ್ತಿದ್ದೇನೆ.

ದಿನಾಂಕಃ 07.01.2023 ರಂದು ರಾತ್ರಿ 9–00 ಗಂಟೆಯಿಂದ 10–00 ಗಂಟೆ ಸಮಯದಲ್ಲಿ ಬೇಲೂರು ತಾಲ್ಲೂಕು, ಚನ್ನಾಪುರ ಗ್ರಾಮದ ಚಾಸಾ–1 ರವರ ಮನೆಯ ಮುಂಭಾಗದ ಖಾತಾ ನಂ–17ರ ಖಾಲಿ ನಿವೇಶನದಲ್ಲಿ ಚಾಸಾ–1 ಮತ್ತು ಚಾಸಾ–2 ರವರು ಭತ್ತದ ಹುಲ್ಲನ್ನು ಹಾಕುತ್ತಿದ್ದಾಗ, 1ನೇ ಆರೋಪಿಯಾದ ನೀನು ಚಾಸಾ–1 ರವರು ಭತ್ತದ ಹುಲ್ಲನ್ನು ಹಾಕದಂತೆ ಅಡ್ಡಗಟ್ಟಿದ್ದು, ಭಾರತೀಯ ದಂಡ ಸಂಹಿತೆ ಪ್ರಕರಣ 341 ಸಹವಾಚಕ 34ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿದ್ದು, ಆರೋಪಿತರ ಪೈಕಿ 1ನೇ ಆರೋಪಿಯಾದ ನೀನು ಚಾಸಾ-1 ರವರನ್ನು ಉದ್ದೇಶಿಸಿ ಸೂಳೆಮುಂಡೆ, ಕಳ್ಳಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಅಲ್ಲದೇ 2 ರಿಂದ 3ನೇ ಆರೋಪಿತರಾದ ನೀವುಗಳು ಚಾಸಾ-1 ಮತ್ತು ಚಾಸಾ-2 ರವರಿಗೆ ಸೂಳೆಮುಂಡೆ, ಬೋಳಿಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿದ್ದು, ಭಾರತೀಯ ದಂಡ ಸಂಹಿತೆ ಪ್ರಕರಣ 504 ಸಹವಾಚಕ 34ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿ, ಆರೋಪಿತರ ಪೈಕಿ 1ನೇ ಆರೋಪಿಯಾದ ನೀನು ಚಾಸಾ-1 ರವರ ತಲೆ ಕೂದಲು ಹಿಡಿದುಕೊಂಡು ಕೈಯಿಂದ ಬಲಕೆನ್ನೆಗೆ ಮತ್ತು ಎಡಕೆನ್ನೆಗೆ ಹೊಡೆದು, ಕೈ ಬೆರಳುಗಳಿಂದ ಚಾಸಾ-1 ರವರ ಬಲಗೈಗೆ ಪರಚಿ ನೋವುಂಟು ಮಾಡಿದ್ದು, ಭಾರತೀಯ ದಂಡ ಸಂಹಿತೆ ಪ್ರಕರಣ 323 ಸಹವಾಚಕ 34ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಮತ್ತು ಸ್ಥಳದಲ್ಲಿ ಆರೊಪಿತರಾದ ನೀವೆಲ್ಲರೂ ಹಲ್ಲೆ ಮಾಡುವ ಸಮಾನ ಉದ್ದೇಶವನ್ನು ಹೊಂದಿದ್ದು, ಆರೋಪಿತರಾದ ನೀವೆಲ್ಲರೂ ಸೇರಿ ಈ ಜಾಗವನ್ನು ನಾವು ಪಡೆದುಕೊಳ್ಳುತ್ತೇವೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಭಾರತೀಯ ದಂಡ ಸಂಹಿತೆ ಪ್ರಕರಣ 506 ಸಹವಾಚಕ 34ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

(ಮೇಲ್ಕಂಡ ದೋಷಾರೋಪಣೆಯ ಮೇಲೆ ನಿಮ್ಮನ್ನು ಈ ನ್ಯಾಯಾಲಯದ ವಿಚಾರಣೆಗೆ ಗುರಿಪಡಿಸಿರುತ್ತೇನೆ ಎಂದು ಈ ಮೂಲಕ ನಿರ್ದೇಶಿಸುತ್ತೇನೆ)

ಸ್ಥಳ      ಃ ಬೇಲೂರು
ದಿನಾಂಕಃ 16.07.2024

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು